ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
*ವಾರ್ತಾ ಇಲಾಖೆ*
ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001

ಸಂಖ್ಯೆ: ವಾಇ : ಸುಮಪ : ಪ ಪ್ರ : 2014–15 : ಜೂನ್ 27 , 2014

**ಪತ್ರಿಕಾ ಪ್ರಕಟಣೆ**

# ಉಮಾದೇವಿ ಟೋಪಣ್ಣವರ್ ಅವರ ನಿಧನಕ್ಕೆ ಮುಖ್ಯಮಂತ್ರಿ ಕಂಬನಿ

ಬೆಂಗಳೂರು, ಜೂನ್ 27 (ಕರ್ನಾಟಕ ವಾರ್ತೆ) :

*ಕನ್ನಡಮ್ಮ* ಪತ್ರಿಕೆಯ ಸಂಪಾದಕಿ ಶ್ರೀಮತಿ ಉಮಾದೇವಿ ಮಹಾದೇವ ಟೋಪಣ್ಣನವರ್ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಕಂಬನಿ ಮಿಡಿದಿದ್ದಾರೆ.

ತಮ್ಮ ಪತಿ ಮಹಾದೇವ ಎಸ್ ಟೋಪಣ್ಣನವರ್ ಅವರ ನಿಧನಾನಂತರ ಶ್ರೀಮತಿ ಉಮಾದೇವಿ ಟೋಪಣ್ಣನವರ್ ಅವರು ಗಡಿಜಿಲ್ಲೆ ಬೆಳಗಾವಿಯಲ್ಲಿ ಕನ್ನಡಮ್ಮ ಕನ್ನಡ ದಿನ ಪತ್ರಿಕೆಯನ್ನು ಒಂದೂವರೆ ದಶಕಗಳ ಕಾಲ ಸಮರ್ಥವಾಗಿ ಮುನ್ನಡೆಸಿ, ಆ ಭಾಗದಲ್ಲಿ ಕನ್ನಡತನವನ್ನು ಉಳಿಸಿ ಬೆಳೆಸುವಲ್ಲಿ ಮಹತ್ತರ ಕೊಡುಗೆ ನೀಡಿದ್ದರು ಎಂದು ಶ್ರೀ ಸಿದ್ದರಾಮಯ್ಯ ಅವರು ಸ್ಮರಿಸಿದ್ದಾರೆ.

ಉತ್ತರ ಕರ್ನಾಟಕದಲ್ಲಿ ಅಧಿಕ ಪುಟಗಳ ಹೊತ್ತ ಆಕರ್ಷಕ ವಿನ್ಯಾಸದ ಪ್ರಪ್ರಥಮ ಸ್ಥಳೀಯ ಕನ್ನಡ ದಿನ ಪತ್ರಿಕೆಯಾಗಿ ರೂಪುಗೊಂಡ ಕನ್ನಡಮ್ಮ ಪತ್ರಿಕೆಯ ಜೀವಾಳವೇ ಆಗಿದ್ದ ಶ್ರೀಮತಿ ಉಮಾದೇವಿ ಟೋಪಣ್ಣನವರ್ ಅವರು ಪತ್ರಿಕೋದ್ಯಮದ ಜೊತೆಗೆ ಹಲವಾರು ಸಾಮಾಜಿಕ ಚಟುವಟಿಕೆಗಳಲ್ಲೂ ಗುರುತಿಸಿಕೊಂಡಿದ್ದು ಇದೀಗ ಇತಿಹಾಸವಾಗಿದೆ ಎಂದು ಮುಖ್ಯಮಂತ್ರಿ ಬಣ್ಣಿಸಿದ್ದಾರೆ.

ಶ್ರೀಮತಿ ಟೋಪಣ್ಣನವರ್ ಅವರ ಆತ್ಮಕ್ಕೆ ಶಾಂತಿ ದೊರಕಲೆಂದೂ, ಅವರ ಕುಟುಂಬ ವರ್ಗ ಹಾಗೂ ಅಪಾರ ಅಭಿಮಾನಿ ವರ್ಗಕ್ಕೆ ದುಃಖ ಭರಿಸುವ ಶಕ್ತಿ ನೀಡಲೆಂದೂ ಶ್ರೀ ಸಿದ್ದರಾಮಯ್ಯ ಅವರು ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ.

**********

ಡಿ ಪಿ ಎಂ